ಅ.ದಾ. ನಂ.23/2017
ಪಿಡಬ್ಲೂ ೦ಃ 1

ಸಾಕ್ಷಿಯನ್ನು ಇಂದು ದಿನಾಂಕ 23-11-2021 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ.ವಿ ಜಿ ಸಿ ವಕೀಲರಿಂದ

1. ನನ್ನ ತಂದೆ ಯಲ್ಲಪ್ಪನಿಗೆ ನಾನು, 1 ನೇ ಪ್ರತಿವಾದಿ ಹಾಗೂ ಗುರಪ್ಪ ಅಂತಾ ಇದ್ದಾರೆ. ನಮ್ಮ ಕುಟುಂಬಕ್ಕೆ ಒಟ್ಟಾರೆಯಾಗಿ 32 ಎಕರೆ 1 ಕಡೆ ಹಾಗೂ 14 ಎಕರೆ ಇನ್ನೊಂದು ಕಡೆ ಜಮೀನು ಇದೆ. ಒಟ್ಟು 46 ಎಕರೆ ಜಮೀನು ಎಂದರೆ ಸರಿ. 1 ನೇ ಪ್ರತಿವಾದಿಗೆ 3 ಜನ ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು. ಹೆಣ್ಣು ಮಗಳ ಹೆಸರು ಶ್ರೀದೇವಿ. 1 ನೇ ಪ್ರತಿವಾದಿಯ ಹೆಂಡತಿ ಇರುತ್ತಾಳೆ. ಅವರು ಹೆಸರು ನಿಂಗಮ್ಮ. 1 ನೇ ಪ್ರತಿವಾದಿ ತೀರಿಕೊಂಡಿದ್ದಾನೆ ಎಂದರೆ ಸರಿ. ಈ ದಾವೆ ಸಲ್ಲಿಸಿದ ನಂತರ 1 ನೇ ಪ್ರತಿವಾದಿ ತೀರಿಕೊಂಡಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ತೀರಿಕೊಂಡ ನಂತರ ಅವನ ಹೆಂಡತಿ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. 15 ವರ್ಷಕ್ಕಿಂತ ಮೇಲ್ಪಟ್ಟು ನಾವು ಭಾಗ ಮಾಡಿಕೊಂಡಿದ್ದೇವೆ.

2. ವಾಟ್ನಿ ಮುಖಾಂತರ ದಾವಾ ಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ಹೋಗಿದೆ ಎಂದರೆ ಸರಿಯಲ್ಲ. ನನ್ನ ಭಾಗಕ್ಕೆ ಬಂದಿದೆ. 1 ನೇ ಪ್ರತಿವಾದಿಯ ಭಾಗಕ್ಕೆ ಸರ್ವೆ ನಂಬರ 26 ರಲ್ಲಿ 14 ಎಕರೆ ಜಮೀನು ಬಂದಿದೆ. ತಂದೆಯವರು ಇದ್ದಾಗ ಭಾಗ ಆಗಿದ್ದು ಮತ್ತು ಭಾಗ ಪತ್ರ ಆಗಿದೆ. ಈ ವಿಭಾಗ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 1999 ರಲ್ಲಿ ವಿಭಾಗವಾದಂತೆ ದಾವಾ ಜಮೀನು 1 ನೇ ಪ್ರತಿವಾದಿಗೆ ಹೋಗಿದ್ದು ಗ್ರಾಮದಲ್ಲಿರುವ ಮನೆ ನನ್ನ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ.

3. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಆದರೆ ಸಹಿ ಮಾಡುತ್ತೇನೆ. 1999 ರಿಂದ ದಾವಾ ಜಮೀನು ಇಲ್ಲಿಯವರೆಗೂ 1 ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ಸಾಕ್ಷಿ 2017 ರಲ್ಲಿ 1 ನೇ ಪ್ರತಿವಾದಿ ಮೋಸ ಮಾಡಿ ತನ್ನ ಹೆಸರು ಹಚ್ಚಿಕೊಂಡಿದ್ದಾನೆ ಅಂತಾ ನುಡಿಯುತ್ತಾರೆ. 1999 ರಿಂದ 2017 ರವರೆಗೂ ನಾನು ಜಮೀನು ಉತಾರೆ ನೋಡಿಯೇ ಇಲ್ಲ. ವರ್ಷಕ್ಕೊಮ್ಮೆ ಗ್ರಾಮ ಲೆಕ್ಕಾಧಿಕಾರಿಯ ಮುಂದೆ ಕಂದಾಯ ಪಾವತಿಸುತ್ತಿದ್ದು ಅದರ ರಶೀದಿ ನನ್ನ ಹೆಸರಿನಲ್ಲಿ ಕೊಡುತ್ತಿದ್ದರು. 1999 ರಿಂದ ಇಲ್ಲಿಯವರೆಗೂ ಕಂದಾಯ ಯಾರು

ತುಂಬುತ್ತಿದ್ದರು ಎಂದರೆ ಸಾಕ್ಷಿ ತಾನು ಶಾಲೆ ಕಲಿತಿಲ್ಲ ಆ ಬಗ್ಗೆ ತನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ